# ಸ್ಥಳೀಯ ಉದ್ಯಮಿಗಳ ವ್ಯವಹಾರ ವೃದ್ಧಿಗೆ ಫ್ಲಿಪ್ ಕಾರ್ಟ್ ನಿಂದ ಡಿಜಿಟಲ್ ಪ್ಲಾಟ್ ಫಾರ್ಮ್ ಶಾಪ್ಸಿ ಆರಂಭ

- **ಫ್ಲಿಪ್ ಕಾರ್ಟ್ ನಿಂದ ಆನ್ ಲೈನ್ ವ್ಯವಹಾರವನ್ನು ಆರಂಭಿಸುವವರಿಗಾಗಿ ಶಾಪ್ಸಿ ಎಂಬ ವಿನೂತನ ಯೋಜನೆ**
- **ಭಾರತೀಯರು ಯಾವುದೇ ಮುಂಗಡ ಬಂಡವಾಳವಿಲ್ಲದೇ ತಮ್ಮದೇ ಆದ ಸ್ವಂತ ಆನ್ ಲೈನ್ ವ್ಯವಹಾರವನ್ನು ಆರಂಭಿಸಲು ಈ ಶಾಪ್ಸಿ ಅವಕಾಶಗಳನ್ನು ಕಲ್ಪಿಸುತ್ತದೆ.**
- **ಈ ಶಾಪ್ಸಿ ಮೂಲಕ ಫ್ಲಿಪ್ ಕಾರ್ಟ್, 2023 ರ ವೇಳೆಗೆ ಭಾರತದಲ್ಲಿ 25 ಮಿಲಿಯನ್ ಆನ್ ಲೈನ್ ಉದ್ಯಮಿಗಳು ಡಿಜಿಟಲ್ ಕಾಮರ್ಸ್ ನ ಪ್ರಯೋಜನಗಳನ್ನು ಪಡೆಯುವ ಗುರಿಯನ್ನು ಹೊಂದಿದೆ.**
- **ಫ್ಯಾಶನ್, ಬ್ಯೂಟಿ, ಮೊಬೈಲ್ಸ್, ಹೋಂ ಅಪ್ಲಾಯನ್ಸಸ್ ಮತ್ತು ಇನ್ನೂ ಹಲವಾರು ವಿಭಾಗಗಳ 15 ಕೋಟಿಗೂ ಅಧಿಕ ಉತ್ಪನ್ನಗಳ ವ್ಯವಹಾರಕ್ಕೆ ಈ ಶಾಪ್ಸಿ ಅವಕಾಶ ಕಲ್ಪಿಸಲಿದೆ.**

ಬೆಂಗಳೂರು, ಜುಲೈ 01, 2021: ಭಾರತದ ದೇಸೀಯ ಇ-ಕಾಮರ್ಸ್ ಮಾರ್ಕೆಟ್ ಪ್ಲೇಸದ್ ಆಗಿರುವ ಫ್ಲಿಪ್ ಕಾರ್ಟ್ ಇಂದು ಶಾಪ್ಸಿ ಎಂಬ ವಿನೂತನವಾದ ಯೋಜನೆಯನ್ನು ಪ್ರಕಟಿಸಿದೆ. ಇದು ಆ್ಯಪ್ ಆಧಾರಿತ ಸೇವೆಯಾಗಿದ್ದು, ಇದರ ಮೂಲಕ ಭಾರತೀಯರು ಯಾವುದೇ ಪೂರ್ವ ಬಂಡವಾಳವನ್ನು ತೊಡಗಿಸದೇ ತಮ್ಮ ಆನ್ ಲೈನ್ ವ್ಯವಹಾರಗಳನ್ನು ಆರಂಭಿಸಬಹುದಾಗಿದೆ. ತಮ್ಮ ಸ್ಥಳೀಯ ಜಾಲದ ಮೇಲೆ ಪ್ರಭಾವ ಬೀರುವ ಹಾಗೂ ಅವರ ಆಕಾಂಕ್ಷೆಗಳನ್ನು



ಈಡೇರಿಸುವ ಸಾಮರ್ಥ್ಯದೊಂದಿಗೆ, ಶಾಪ್ಸಿಯ ಬಳಕೆದಾರರು ಫ್ಲಿಪ್ ಕಾರ್ಟ್ ಮಾರಾಟಗಾರರು ನೀಡುವ 15 ಕೋಟಿಗೂ ಅಧಿಕ ಉತ್ಪನ್ನಗಳ ವ್ಯಾಪಕ ಆಯ್ಕೆಯ ಕ್ಯಾಟಲಾಗ್ ಗಳನ್ನು ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಇದರಲ್ಲಿ ಫ್ಯಾಶನ್, ಸೌಂದರ್ಯ, ಎಲೆಕ್ಟ್ರಾನಿಕ್ಸ್ ಮತ್ತು ಗೃಹೋಪಯೋಗಿ ಉತ್ಪನ್ನಗಳನ್ನು ಜನಪ್ರಿಯ ಸಾಮಾಜಿಕ ಮಾಧ್ಯಮ ಮತ್ತು ಸಂದೇಶವಾಹಕ ಆ್ಯಪ್ ಗಳಿಂದ ವ್ಯವಹಾರ ನಡೆಸಬಹುದಾಗಿದೆ.

ಬಳಕೆದಾರರು ತಮ್ಮ ಮೊಬೈಲ್ ಸಂಖ್ಯೆಗಳ ಮೂಲಕ ಸರಳವಾಗಿ ಶಾಪ್ಸಿ ಆ್ಯಪ್ ನಲ್ಲಿ ನೋಂದಣಿ ಮಾಡಿಕೊಳ್ಳಬೇಕು ಮತ್ತು ತಮ್ಮ ಆನ್ ಲೈನ್ ಉದ್ಯಮಶೀಲತ್ವದ ಪ್ರಯಾಣವನ್ನು ಆರಂಭಿಸಬಹುದು. ಹೂಡಿಕೆ, ದಾಸ್ತಾನು ಅಥವಾ ಲಾಜಿಸ್ಟಿಕ್ ನಿರ್ವಹಣೆಯ ತೊಂದರೆಯಿಲ್ಲದೇ ತಮ್ಮ ನಂಬಿಕಾರ್ಹ ಜನರ ನೆಟ್ ವರ್ಕ್ ಗೆ ಪ್ರವೇಶವನ್ನು ಹೊಂದಿರುವವರೆಗೆ ಉದ್ಯಮಿಗಳು ತಮ್ಮ ವ್ಯವಹಾರವನ್ನು ಸ್ಥಾಪಿಸಿಕೊಳ್ಳಬಹುದಾಗಿದೆ.

ಈ ಬಳಕೆದಾರರು ಜನಪ್ರಿಯ ಸಾಮಾಜಿಕ ಮಾಧ್ಯಮ ಮತ್ತು ಸಂದೇಶ ಆ್ಯಪ್ ಗಳ ಮೂಲಕ ಈ ತರಹೇವಾರಿ ಉತ್ಪನ್ನಗಳ ಕ್ಯಾಟಲಾಗ್ ಅನ್ನು ಸಾಕಷ್ಟು ಗ್ರಾಹಕರಿಗೆ ಹಂಚಿಕೊಳ್ಳಬಹುದು, ಗ್ರಾಹಕರ ಪರವಾಗಿ ಉತ್ಪನ್ನಗಳಿಗೆ ಆರ್ಡರ್ ಮಾಡಿಕೊಳ್ಳಬಹುದು ಮತ್ತು ವ್ಯವಹಾರಗಳ ಮೇಲೆ ಕಮೀಷನ್ ಪಡೆಯಲು ಅವಕಾಶವಿದೆ. ಆರ್ಡರ್ ಮಾಡಿದ ಉತ್ಪನ್ನಗಳ ಕ್ಯಾಟಲಾಗ್ ಆಧಾರದಲ್ಲಿ ಕಮೀಷನ್ ಶೇಕಡ ನಿಗದಿಯಾಗುತ್ತದೆ. ವಿಶ್ವಾಸಾರ್ಹವಾದ ವ್ಯಕ್ತಿಯೊಂದಿಗಿನ ಸಂವಾದಗಳ ಮೂಲಕ ಪ್ರಕ್ರಿಯೆಯನ್ನು ಸರಳಗೊಳಿಸುವ ಮೂಲಕ ಡಿಜಿಟಲ್ ವಾಣಿಜ್ಯ ಗ್ರಾಹಕರಿಗೆ ಉತ್ಪನ್ನಗಳಿಗೆ ಹೊಸ ಪ್ರವೇಶವನ್ನು ಒದಗಿಸುವ ಉದ್ದೇಶ ಈ ಪ್ಲಾಟ್ ಫಾರ್ಮ್ ನ ಧ್ಯೇಯವಾಗಿದೆ.

ಫ್ಲಿಪ್ ಕಾರ್ಟ್ ನ ಗ್ರೋತ್ ಅಂಡ್ ಮಾನಿಟೈಸೇಶನ್ ವಿಭಾಗದ ಸೀನಿಯರ್ ವೈಸ್ ಪ್ರೆಸಿಡೆಂಟ್ ಪ್ರಕಾಶ್ ಸಿಕಾರಿಯಾ ಅವರು ಈ ಬಗ್ಗೆ ಮಾತನಾಡಿ, ``ಕಳೆದ ಹಲವಾರು ವರ್ಷಗಳಲ್ಲಿ ಫ್ಲಿಪ್ ಕಾರ್ಟ್ ದೇಶಾದ್ಯಂತ ನೇರ ಮತ್ತು ಪರೋಕ್ಷ ಉದ್ಯೋಗಗಳ ಅವಕಾಶಗಳನ್ನು ಕಲ್ಪಿಸುವಲ್ಲಿ ತನ್ನ ಬದ್ಧತೆಯನ್ನು ತೋರುತ್ತಾ ಬಂದಿದೆ. ಈ ಬದ್ಧತೆಯನ್ನು ಮತ್ತಷ್ಟು ವಿಸ್ತರಣೆ ಮಾಡುವ ನಿಟ್ಟಿನಲ್ಲಿ ಇದೀಗ ಶಾಪ್ಸಿಯನ್ನು ಆರಂಭಿಸಲಾಗಿದೆ ಮತ್ತು ಇದರ ಮೂಲಕ ಭಾರತದ ಮಿಲಿಯನ್ ಗಟ್ಟಲೆ ಜನರಿಗೆ ಹೆಚ್ಚುವರಿ ಆದಾಯ ಗಳಿಸುವ ಅವಕಾಶಗಳನ್ನು ಕಲ್ಪಿಸುತ್ತಿದೆ. ಈಗ, ಯಾರು ಬೇಕಾದರೂ, ಎಲ್ಲಿಂದ ಬೇಕಾದರೂ ಶೂನ್ಯ ಬಂಡವಾಳದೊಂದಿಗೆ

ತಮ್ಮ ಆನ್ ಲೈನ್ ವ್ಯವಹಾರವನ್ನು ಆರಂಭಿಸಬಹುದಾಗಿದೆ. ಇದರ ಜತೆಗೆ ನಾವು ಭಾರತೀಯ ಉದ್ಯಮಿಗಳಿಗೆಂದೇ ಫ್ಲಿಪ್ ಕಾರ್ಟ್ ಇ-ಕಾಮರ್ಸ್ ಪರಿಣತಿಯನ್ನು ಆರಂಭಿಸುತ್ತಿದ್ದೇವೆ. ಉದ್ಯಮಿಗಳಿಗೆ ಈಗ ಫ್ಲಿಪ್ ಕಾರ್ಟ್ ನ ಕ್ಯಾಟಲಾಗ್, ಸ್ಥಾಪಿತವಾದ ವಿತರಣಾ ಜಾಲಗಳು ಮತ್ತು ಮೂಲಸೌಕರ್ಯಗಳನ್ನು ವಿಶ್ವಾಸಾರ್ಹತೆ ಮತ್ತು ವೇಗವಾಗಿ ಬಳಸಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಗಿದೆ. ಈ ಪ್ರಯೋಜನಗಳು ಅಂತಿಮ ಹಂತದ ಗ್ರಾಹಕರ ಅನುಭವವನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ ಮತ್ತು ಅವರ ವ್ಯವಹಾರವನ್ನು ವೃದ್ಧಿಸಿಕೊಳ್ಳಲು ಸಹಕಾರಿಯಾಗಲಿವೆ" ಎಂದರು.

ವಿಶ್ವಾಸಾರ್ಹತೆ ಮತ್ತು ಸರಳೀಕರಣದ ಸವಾಲುಗಳಿಂದಾಗಿ ಭಾರತದಲ್ಲಿ ಅನೇಕ ಆನ್ ಲೈನ್ ಬಳಕೆದಾರರು ಆನ್ ಲೈನ್ ನಲ್ಲಿ ವ್ಯವಹಾರ ನಡೆಸಲು ಸಾಧ್ಯವಾಗುತ್ತಿಲ್ಲ. ಜಾಗತಿಕ ಮಟ್ಟದಲ್ಲಿ `ವಿತರಿತ ವಾಣಿಜ್ಯ'ವು ಒಂದು ಜಾಲವಾಗಿದ್ದು, ಇಂತಹ ಸಮಸ್ಯೆಗಳು ಅಥವಾ ಸವಾಲುಗಳನ್ನು ಪರಿಹರಿಸಿ ಅವರ ವ್ಯವಹಾರವನ್ನು ಗರಿಷ್ಠ ಮಟ್ಟದಲ್ಲಿ ಬೆಳವಣಿಗೆ ಹೊಂದಲು ನೆರವಾಗುತ್ತಿದೆ. ಇದೇ ನಿಟ್ಟಿನಲ್ಲಿ ಇದೀಗ ಶಾಪ್ಸಿ ಆರಂಭವಾಗಿದ್ದು, ಸಮುದಾಯಗಳಿಗೆ ಇ-ಕಾಮರ್ಸ್ ಶಕ್ತಿಯನ್ನು ತುಂಬಲಿದೆ.

ಇದಲ್ಲದೇ, ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಹಲವಾರು ವೈಯಕ್ತಿಕ ಉದ್ಯಮಿಗಳು ಅಥವಾ ಸ್ವಯಂ-ಉದ್ಯಮಿಗಳು ತಮ್ಮ ಮಹತ್ವಾಕಾಂಕ್ಷೆಗಳನ್ನು ಸಾಕಾರಗೊಳಿಸಲು ಹೆಣಗಾಡುತ್ತಿದ್ದಾರೆ ಮತ್ತು ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಇದರ ಪರಿಣಾಮ ಅವರಲ್ಲಿ ಅನೇಕರು ತಮ್ಮ ವ್ಯವಹಾರಗಳನ್ನು ಸ್ಥಗಿತಗೊಳಿಸಿದ್ದಾರೆ. ಈ ಸಾಂಕ್ರಾಮಿಕವು ಉದ್ಯಮಿಗಳು ತಮ್ಮ ವ್ಯಹವಾರ, ಗ್ರಾಹಕರು ತಮ್ಮ ಶಾಪಿಂಗ್ ಹಾಗೂ ಅನೇಕ ಸಣ್ಣ ಮತ್ತು ಸೂಕ್ಷ್ಮ ವ್ಯವಹಾರಗಳನ್ನು ಲಾಭದಾಯಕವಾಗಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಡಿಜಿಟಲ್ ವಾಣಿಜ್ಯ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವಂತೆ ಮಾಡಿದೆ. ಅದೇ ರೀತಿ ನವೀನ ಇ-ಕಾಮರ್ಸ್ ಮಾದರಿಗಳಿಗೆ ಇದು ಬಹು ದೊಡ್ಡ ಅವಕಾಶಗಳನ್ನು ಕಲ್ಪಿಸಿದಂತಾಗಿದೆ. ಇದು ಈ ವ್ಯವಹಾರಗಳಿಗೆ ಡಿಜಿಟಲ್ ಬ್ರ್ಯಾಂಡ್ ಆಗಲು ಸಹಾಯ ಮಾಡುವುದರೊಂದಿಗೆ ದೇಶಾದ್ಯಂತ ಗ್ರಾಹಕರ ನೆಲೆಗಳನ್ನು ಪೂರೈಸುವುದರ ಜತೆಗೆ ಗಟ್ಟಿಯಾಗಿ ನೆಲೆಯೂರಲು ಸಹಕಾರಿಯಾಗಿದೆ.

You can download Shopsy from:
https://play.google.com/store/apps/details?id=com.flipkart.shopsy




A look at *Shopsy* interface

About the Flipkart Group

The Flipkart Group is one of India's leading digital commerce entities and includes group companies Flipkart, Myntra, Flipkart Wholesale and Cleartrip. Started in 2007, Flipkart has enabled millions of consumers, sellers, merchants, and small businesses to be a part of India's e-commerce revolution, with a registered customer base of more than 350 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs have inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, Flipkart

Wholesale and Cleartrip, the Flipkart Group will continue to steer the transformation of commerce in India through technology.

For more information, please write to media@flipkart.com